ದಿನಾಂಕ 22.01.2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 1ನೇ ಪ್ರತಿವಾದಿ ಪರ ಶ್ರೀ ಬಿ.ಕೆ.ಪಿ., ವಕೀಲರಿಂದಃ-

ನನ್ನ ಮದುವೆಯಾಗಿ 22 ವರ್ಷಗಳಾಗಿವೆ. ನನಗೆ ಮತ್ತು ನಾಗೇಂದ್ರರವರಿಗೆ ಇಬ್ಬರು ಗಂಡು ಮಕ್ಕಳು, ಅವರೆಂದರೆ ದರ್ಶನ್.ಎನ್ ಮತ್ತು ಸಂಜಯ್‌ಗೌಡ. ನನ್ನ ಮಕ್ಕಳನ್ನು ಈ ಕೇಸಿನಲ್ಲಿ ಪಾರ್ಟಿಯಾಗಿ ಮಾಡಿಲ್ಲ. ನಮ್ಮ ಕುಟುಂಬದ ಎಲ್ಲಾ ಸ್ವತ್ತುಗಳ ಬಗ್ಗೆ ನನಗೆ ತಿಳುವಳಿಕೆ ಇದೆ. ಚನ್ನಮಾರಯ್ಯ ನನ್ನ ಮಾವ. ಅವರ ತಂದೆಯ ಹೆಸರು ಕಾಳಮಾರಯ್ಯ. ಚನ್ನಮಾರಯ್ಯನವರಿಗೆ ಮೂರು ಜನ ಮಕ್ಕಳು, ಅವರೆಂದರೆ 1ನೇ ಪ್ರತಿವಾದಿ ಶಂಭುಲಿಂಗಯ್ಯ, 2ನೇ ಪ್ರತಿವಾದಿ ಕೃಷ್ಣಪ್ಪ ಮತ್ತು ನನ್ನ ಪತಿ ನಾಗೇಂದ್ರ. ನಾನು ಮದುವೆಯಾದಾಗಿನಿಂದ ನಾನು ನನ್ನ ಗಂಡನ ಜೊತೆ ಪ್ರತ್ಯೇಕವಾಗಿ ವಾಸವಿದ್ದೆ. ಪ್ರತಿವಾದಿ 1 ಮತ್ತು 2ರವರು ಸಹ ಪ್ರತ್ಯೇಕವಾಗಿ ವಾಸವಿದ್ದಾರೆ ಎಂದರೆ ಸರಿ.

2. ದಾವಾ ಐಟಂ ನಂ.6ರಲ್ಲಿ ಅರ್ಧ ಭಾಗದಲ್ಲಿ ನಾವು ವಾಸವಿದ್ದೇನೆ, ಉಳಿದ ಅರ್ಧ ಭಾಗ 2ನೇ ಪ್ರತಿವಾದಿ ಕೃಷ್ಣಪ್ಪರವರಿಗೆ ಸೇರಿದ್ದು ಎಂದರೆ ಸರಿ. ದಾವಾ ಐಟಂ ನಂ.4ರಲ್ಲಿ 1ನೇ ಪ್ರತಿವಾದಿ ಶಂಭುಲಿಂಗಯ್ಯ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ಚನ್ನಮಾರಯ್ಯನವರಿಗೆ ಪಿತ್ರಾರ್ಜಿತವಾಗಿ ಬಂದಿದ್ದ ಮನೆ ನಮಗೆ ಮತ್ತು 2ನೇ ಪ್ರತಿವಾದಿಯ ಭಾಗಕ್ಕೆ ಬಂತು ಹಾಗೂ 1ನೇ ಪ್ರತಿವಾದಿ ದಾವಾ ಐಟಂ ನಂ.4ರಲ್ಲಿ ಅವರೇ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ದಾವಾ ಐಟಂ ನಂ.1ರಲ್ಲಿ ಇಪ್ಪತ್ತಾರುವರೆ ಗುಂಟೆಯಲ್ಲಿ ನೀವು ಉಳುಮೆ ಮಾಡುತ್ತಿದ್ದೀರಿ ಎಂದರೆ ಸಾಕ್ಷಿಯು ಅದು ಕಡಿಮೆ ಇದೆ, ಆದರೆ ಉಳುಮೆ ಮಾಡುತ್ತಿದ್ದೇವೆ

ಎಂದು ನುಡಿಯುತ್ತಾರೆ. ನೀವು ಉಳುಮೆ ಮಾಡುತ್ತಿರುವ ಆ ಜಮೀನಿನ ಪೂರ್ವಕ್ಕೆ ಶಂಭುಲಿಂಗಯ್ಯನವರ ಭಾಗದ ಜಮೀನು ಎಂದರೆ ಸಾಕ್ಷಿಯು ರಂಗಯ್ಯ ಬಿನ್ ಹನುಮಯ್ಯರವರ ಜಮೀನು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಸರ್ವೇ ನಂ.324 ರಲ್ಲಿ ಪಶ್ಚಿಮ ಭಾಗದ ಜಮೀನನ್ನು ನಾವು ಉಳುಮೆ ಮಾಡುತ್ತಿದ್ದೇವೆ, ನಮ್ಮ ಪೂರ್ವ ಭಾಗಕ್ಕೆ ಶಂಭುಲಿಂಗಯ್ಯರವರ ಭಾಗ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಪೂರ್ವಕ್ಕೆ 2 ನೇ ಪ್ರತಿವಾದಿ ಕೃಷ್ಣಪ್ಪ ಉಳುಮೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಅಂದರೆ ಸರ್ವೇ ನಂ.324 ರಲ್ಲಿ ಮೂರು ಜನರು ಪ್ರತ್ಯೇಕವಾಗಿ ಉಳುಮೆ ಮಾಡಿಕೊಂಡು ಪ್ರತ್ಯೇಕವಾಗಿ ಸ್ವಾಧೀನದಲ್ಲಿದ್ದೇವೆ ಎಂದರೆ ಸರಿ.

3. ದಾವಾ ಐಟಂ ನಂ.2 ಚನ್ನಮಾರಯ್ಯರವರಿಗೆ ಸೇರಿತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ದಾವಾ ಐಟಂ ನಂ.2 ಕಾಳಮಾರಯ್ಯ ಬಿನ್ ಕಾಳಮಾರಯ್ಯರವರಿಗೆ ಸೇರಿದ್ದು, ನಿಮ್ಮ ಕುಟುಂಬಕ್ಕೆ ಸೇರಿದ್ದಲ್ಲ ಎಂದರೆ ಸಾಕ್ಷಿಯು ಚನ್ನಮಾರಯ್ಯರವರಿಗೆ ಸೇರಿದ್ದು ಎಂದು ನುಡಿಯುತ್ತಾರೆ. ಸರ್ವೇ ನಂ.323 ಸುಗ್ಗನಹಳ್ಳಿ ಗ್ರಾಮಕ್ಕೆ ಸೇರಿದ್ದು ಬೊಮ್ಮಚನಹಳ್ಳಿಗೆ ಸೇರಿದ್ದಲ್ಲ ಎಂದರೆ ಸಾಕ್ಷಿಯು ಸುಗ್ಗನಹಳ್ಳಿಗೆ ಬರುತ್ತದೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಓ.ಎಸ್.214/2021 ದಾವೆಯನ್ನು ಕಾಂತರಾಜು ಎಂಬುವವರು ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ದಾವಾ ಐಟಂ ನಂ.2 ನಮ್ಮ ಕುಟುಂಬಕ್ಕೆ ಸೇರಿದ್ದಲ್ಲ, ಅದನ್ನು ಅನಾವಶ್ಯಕವಾಗಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ.

4. ದಾವಾ ಐಟಂ ನಂ.3 ರಲ್ಲಿ ಸಹ ನಾವು 5 ಗುಂಟೆ, ಪ್ರತಿವಾದಿ 1

ಮತ್ತು 2 ರವರ ತಲಾ 5 ಗುಂಟೆ ಪ್ರತ್ಯೇಕವಾಗಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕೃಷ್ಣಪ್ಪರವರು 5 ಗುಂಟೆಯನ್ನು ಮಾರಾಟ ಮಾಡಿದ್ದಾರೆ, ಶಂಭುಲಿಂಗಯ್ಯ ಮತ್ತು ನಾಗೇಂದ್ರರವರಿಗೆ ಸಮಭಾಗ ಬರಬೇಕು ಎಂದು ನುಡಿಯುತ್ತಾರೆ. ಕೃಷ್ಣಪ್ಪನವರು ಮೇಲೆ ಹೇಳಿದ 5 ಗುಂಟೆಯನ್ನು ನನ್ನ ಪತಿ ನಾಗೇಂದ್ರರವರಿಗೆ ಮಾರಾಟ ಮಾಡಿದ್ದಾರೆ. ಅದು 25 ವರ್ಷಗಳ ಹಿಂದೆಯೇ. ಆ 5 ಗುಂಟೆಯನ್ನು ನಮಗೆ ಮಾರಾಟ ಮಾಡಿದ್ದಾರೆಂದು ತೋರಿಸಲು ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. 5 ಗುಂಟೆಯನ್ನು ಕೃಷ್ಣಪ್ಪನವರು ನನ್ನ ಪತಿಗೆ ಮಾರಾಟ ಮಾಡಿದ್ದಾರೆಂದು ನಾನು ವಾದಪತ್ರ ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ತಿಳಿಸಿಲ್ಲ. ನನ್ನ ಪತಿ ಇದ್ದಾಗಲೇ ನಮಗೆ ಮತ್ತು ಕೃಷ್ಣಪ್ಪನವರಿಗೆ ಹಳೆ ಮನೆ ಕೊಟ್ಟಿದ್ದರಿಂದ 1 ನೇ ಪ್ರತಿವಾದಿಗೆ ದಾವಾ ಐಟಂ ನಂ.4 ರಲ್ಲಿ ಮನೆ ಕಟ್ಟಿಕೊಳ್ಳಲು ಹೆಚ್ಚಾಗಿ 8 ಗುಂಟೆಯನ್ನು ಅವರ ಭಾಗಕ್ಕೆ ಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು 8 ಗುಂಟೆ ಎಂದು ಕೊಟ್ಟಿಲ್ಲ, ಹಳೆ ಮನೆಯ ವಿಸ್ತೀರ್ಣದಷ್ಟೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

5. ದಾವಾ ಐಟಂ ನಂ.5 ನಮ್ಮ ಕುಟುಂಬಕ್ಕೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.5 ಚನ್ನಮಾರಯ್ಯ ಬಿನ್ ಲೇಟ್ ದೊಡ್ಡಮಾರಯ್ಯ ಎಂಬುವವರಿಗೆ ಸೇರಿದ್ದು ಎಂದರೆ ಸಾಕ್ಷಿಯು ಅಷ್ಟು ನನಗೆ ಕ್ಲಾರಿಟಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.6 135x30 ಅಡಿ ವಿಸ್ತೀರ್ಣ ಇದೆ ಎಂದು ತೋರಿಸಲು ದಾಖಲೆ ಕೊಟ್ಟಿದ್ದೇನೆ, ಅದು ಗ್ರಾಮ ಪಂಚಾಯಿತಿಯವರು ನೀಡಿರುವ ದಾಖಲೆ. ನಿಪಿ-22 ದಾಖಲೆಯಲ್ಲಿ ಆಸ್ತಿಯ ವಿಸ್ತೀರ್ಣ ಬರೆದಿಲ್ಲ ಎಂದರೆ ಸಾಕ್ಷಿಯು

ಬರೆದಿಲ್ಲ ಎಂದು ನುಡಿಯುತ್ತಾರೆ.

6. ಸುಗ್ಗನಹಳ್ಳಿಯಲ್ಲಿ ನಮಗೆ ಮನೆ ಇಲ್ಲ. ದಾವಾ ಐಟಂ ನಂ.7 ಸಹ ನಮ್ಮ ಕುಟುಂಬಕ್ಕೆ ಸೇರಿದ್ದಲ್ಲ ಎಂದರೆ ಸಾಕ್ಷಿಯು ಸರ್ವೇ ನಂ.237 ರಲ್ಲಿ ಎರಡು ಮನೆಯನ್ನು ಶಂಭುಲಿಂಗಯ್ಯನರವರು ಕಟ್ಟಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಆ ಜಾಗವನ್ನು ನನ್ನ ಪತಿ ನಾಗೇಂದ್ರರವರಿಗೆ ಬಿಟ್ಟಿದ್ದು ಎಂದು ನುಡಿಯುತ್ತಾರೆ. ದಾವಾ ಐಟಂ ನಂ.7 ರ ದಾಖಲೆಯನ್ನು ಹಾಜರುಪಡಿಸಿಲ್ಲ. ದಾವಾ ಐಟಂ ನಂ.7 ನಿಮ್ಮ ಕುಟುಂಬಕ್ಕೆ ಸಂಬಂಧಿಸಿಲ್ಲ, ಆದ್ದರಿಂದಲೇ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಸುಗ್ಗನಹಳ್ಳಿಯಲ್ಲಿ ಯಾವುದೇ ರೀತಿಯ ಮನೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.7 ರ ವಿಸ್ತೀರ್ಣ ಬರೆಸಿಲ್ಲ ಎಂದರೆ ಸಾಕ್ಷಿಯು ಅದರಲ್ಲಿ ಎರಡು ಮನೆ ಇರುವುದರಿಂದ ಸರ್ವೇ ನಂ.237 ಎಂದು ಬರೆದಿದ್ದೇವೆ ಎಂದು ನುಡಿಯುತ್ತಾರೆ.

7. ದಾವಾ ಐಟಂ ನಂ.8 ನಿಮ್ಮ ಕುಟುಂಬಕ್ಕೆ ಸೇರಿಲ್ಲ, ಆ ಸಂಬಂಧ ನೀವು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಸುಗ್ಗನಹಳ್ಳಿಯಲ್ಲಿ ಸರ್ವೇ ನಂ.241 ರಲ್ಲಿ ಮನೆ ಇಲ್ಲ ಎಂದು ನುಡಿಯುತ್ತಾರೆ. ನಿಪಿ-14 ರಲ್ಲಿ ನಮೂದು ಮಾಡಿರುವ ಚನ್ನಮಾರಯ್ಯ ಬಿನ್ ದೊಡ್ಡಮಾರಯ್ಯ ನಮ್ಮ ಕುಟುಂಬಕ್ಕೆ ಸೇರಿದವರಲ್ಲ ಎಂದರೆ ಸರಿ. ನಿಪಿ-15 ರಲ್ಲಿ ನಮೂದು ಮಾಡಿರುವವರು ನಮ್ಮ ಕುಟುಂಬಕ್ಕೆ ಸೇರಿದವರಲ್ಲ ಎಂದರೆ ಸರಿ. ನಿಪಿ-18 ರಲ್ಲಿ ನಮೂದು ಮಾಡಿರುವ ಮುನಿಮಾದೇಗೌಡರವರು ನಮ್ಮ ಕುಟುಂಬಕ್ಕೆ ಸೇರಿದವರಲ್ಲ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.